ದಿನಾಂಕ **02-02-2023** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ  ವಾದಿ ಪರ ಶ್ರೀ.ಆರ್ ವಿ ಡಬ್ಲ್ಯೂ ವಕೀಲರಿಂದ :

ನಾನು ಗೆಜ್ಜಹಳ್ಳಿ ವಾಸಿ. ಈ ದಾವೆಯನ್ನು ಫಕ್ಕೀರಪ್ಪ ಮಾಡಿದ್ದಾರೆ.  ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ.  ದಾವೆಯನ್ನು ಯಾವ ಸರ್ವೆ ನಂಬರಿನ ಸಲುವಾಗಿ ಮಾಡಿದ್ದಾರೆ ಎಂದು ಗೊತ್ತಿಲ್ಲ.  ಫಕ್ಕೀರಪ್ಪ ಮೈಲಾರಪ್ಪ ಕಡೇಮನಿ ಎಂದರೆ ಯಲ್ಲಪ್ಪರವರ ತಮ್ಮ. ಪ್ರತಿವಾದಿಯರ ಆಸ್ತಿ ಯಾವುದು ಎಂದು ಗೊತ್ತಿದೆ, ಸರ್ವೆ ನಂಬರ್ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯರು ಅಣ್ಣತಮ್ಮಂದಿರು ಎಂದರೆ ಸರಿ. ಅವರು ಹಿಸ್ಸೆಯಾಗಿದ್ದಾರೆ. ಯಾರು ಯಾರಿಗೆ ಎಷ್ಟೆಷ್ಟು ಕ್ಷೇತ್ರ ಇದೆ ಎಂದು ಗೊತ್ತಿಲ್ಲ. ಈ ದಾವೆಯನ್ನು ವಾದಿಯು ಯಾವ ಉದ್ದೇಶಕ್ಕಾಗಿ ಯಾವ ಪರಿಹಾರ ಕೋರಿ

ದಾಖಲಿಸಿದ್ದಾರೆ ಎಂದು ಗೊತ್ತಿಲ್ಲ. **4** ನೇ ಪ್ರತಿವಾದಿ ಯಲ್ಲಪ್ಪ ಪೂರ್ವದ ಕಡೆಗೆ, ವಾದಿ ಪಶ್ಚಿಮದ ಕಡೆಗೆ ಇದ್ದಾರೆ. ಸೂರ್ಯ ಹುಟ್ಟುವ ಕಡೆ ಯಲ್ಲಪ್ಪ ಎಷ್ಟು ಕ್ಷೇತ್ರದಲ್ಲಿ ಇದ್ದಾರೆ ಎಂದು ಗೊತ್ತಿಲ್ಲ. ಪಶ್ಚಿಮದ ಕಡೆ ವಾದಿ ಎಷ್ಟು ಕ್ಷೇತ್ರದಲ್ಲಿ ಇದ್ದಾರೆ ಎಂದು ಗೊತ್ತಿಲ್ಲ. ನನ್ನ ಜಮೀನಿನ ಯಾವ ಯಾವ ದಿಕ್ಕಿಗೆ ವಾದಿ ಮತ್ತು ಪ್ರತಿವಾದಿಯರ ಜಮೀನು ಇದೆ ಎಂದು ಗೊತ್ತಿಲ್ಲ. ನನ್ನ ಜಮೀನಿನ ಎಡಭಾಗಕ್ಕೆ **4** ನೇ ಪ್ರತಿವಾದಿ ಇದ್ದಾರೆ. ದಾವಾ ಜಮೀನಿನ ಸರ್ವೆ ನಂಬರಿನಲ್ಲಿ ನನ್ನ ಜಮೀನು ಇಲ್ಲ. ವಾದಿ, ಪ್ರತಿವಾದಿಯರ ತಂಟೆ ರಿ.ಸ.ನಂ. **120** ಕ್ಕೆ ಸಂಬಂಧಿಸಿದಂತೆ ಎಂದು ನನಗೆ ಗೊತ್ತಿಲ್ಲ. **4** ನೇ ಪ್ರತಿವಾದಿಯ ಎಷ್ಟು ಜಮೀನಿನಲ್ಲಿ ಅಡಿಕೆ, ಎಷ್ಟು ಜಮೀನಿನಲ್ಲಿ ಮಾವಿನ ಮರಗಳು ಇವೆ ಎಂದು ಗೊತ್ತಿಲ್ಲ. ಪ್ರತಿವಾದಿಯರು ನನಗೆ ಬಹಳ ಬೇಕಾದವರು. ಪ್ರತಿವಾದಿಯರು ನನಗೆ ಬಹಳ ಬೇಕಾದವರು ಆದ ಕಾರಣ ವಾದಿಯ ಜಮೀನಿನಲ್ಲಿ ಮಾವಿನ ಗಿಡಗಳು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ **8** ಎಕರೆಗೂ ಹೆಚ್ಚು ಜಮೀನು ಇದೆ ಎಂದರೆ ಕ್ಷೇತ್ರ ಗೊತ್ತಿಲ್ಲ. ಸರ್ವೆಯರ್ ರವರು ಅಳತೆ ಮಾಡುವಾಗ ನಾನು ವಾದಿ ಪ್ರತಿವಾದಿಯರ ಜಮೀನನ್ನು ಹೋಗಿ ನೋಡಿಲ್ಲ. **4** ನೇ ಪ್ರತಿವಾದಿ ಮತ್ತು ಆತನ ಸಹೋದರರು ವಾದಿಗೆ ಸೇರಿದ **5** ಎಕರೆಗೂ ಹೆಚ್ಚು ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ಈ ದಾವೆ ಹಾಕಲಾಗಿದೆ ಎಂದರೆ ಸರಿಯಲ್ಲ. ಪಶ್ಚಿಮ ದಿಕ್ಕಿನಲ್ಲಿರುವ ವಾದಿಯ ಜಮೀನಿನಲ್ಲಿ ಮಾವಿನ ಮರಗಳು ಇದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. **4** ನೇ ಪ್ರತಿವಾದಿ ಮತ್ತು ಆತನ ಸಹೋದರರ ಮಾತು ಕೇಳಿ ಅವರಿಗೆ ಅನುಕೂಲವಾಗಲಿ ಎಂದು ನಾನು ದಾವಾ ಆಸ್ತಿಯ ಬಾಜೂದಾರನಾಗಿದ್ದರೂ ಸಹ ಎಲ್ಲ ವಿಷಯ ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್